ಜಿಲ್ಲಾಧಿಕಾರಿಗಳ ಹಾಗೂ
ಜಿಲ್ಲಾ ದಂಡಾಧಿಕಾರಿಗಳ ಕಾರ್ಯಾಲಯ
ಕೊಡಗು ಜಿಲ್ಲೆ, ಮಡಿಕೇರಿ–571201

ಕರ್ನಾಟಕ ಸರ್ಕಾರ

ಕಛೇರಿ: 08272–225500
ನಿವಾಸ: 08272–225700
ಫ್ಯಾಕ್ಸ್: 08272–225900
ಈ–ಮೇಲ್:deo.kodagu@gmail.com
ವೆಬ್ ಸೈಟ್:http://www.kodagu.nic.in

ಸಂಖ್ಯೆ:ಪ್ರವಿ/4/2018–19 ದಿನಾಂಕ: 20–08–2018

## ಅಧಿಕೃತ ಜ್ಞಾಪನ

ವಿಷಯ: ಕೊಡಗು ಜಿಲ್ಲೆಯಾದ್ಯಂತ ಭಾರಿ ಮಳೆಯಾಗುತ್ತಿದ್ದು, ಪರಿಹಾರ ಕಾರ್ಯಕ್ಕೆ ಸಂಬಂಧಿಸಿದ ಕಾರ್ಯಗಳನ್ನು ನಿರ್ವಹಿಸುವ ಬಗ್ಗೆ.

ಉಲ್ಲೇಖ: 1) ಜಿಲ್ಲಾಧಿಕಾರಿಗಳು, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ರವರ ಅಧಿಕೃತ ಜ್ಞಾಪನ ಸಂಖ್ಯೆ: ಸಿಎಎಲ್(1) ಸಿಆರ್:160:2017–18, ದಿನಾಂಕ 18.08.2018
2) ಜಿಲ್ಲಾಧಿಕಾರಿಗಳು ಮೈಸೂರು ಜಿಲ್ಲೆ, ಮೈಸೂರು ರವರ ಅಧಿಕೃತ ಜ್ಞಾಪನ ಸಂಖ್ಯೆ: ಪ್ರ.ವಿಕೋಪ/01/2018–19, ದಿನಾಂಕ 17.08.2018
3) ಜಿಲ್ಲಾದಿಕಾರಿಗಳು, ಹಾಸನ ಜಿಲ್ಲೆ, ಹಾಸನ ರವರ ಅಧಿಕರತ ಜ್ಞಾಪನ ಸಂಖ್ಯೆ ಸಿಬ್ಬಂದಿ(1)ಸಿಆರ್/114/2018–19, ದಿನಾಂಕ 19.08.2018.
4) ಮುಖ್ಯಾಧಿಕಾರಿ, ಪುರಸಭೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ ರವರ ಜ್ಞಾಪನ ಸಂಖ್ಯೆ: ಪುಗು/ಓ.ಆ.ನಿ/ಪಿ.ಆರ್/02/2018–19, ದಿನಾಂಕ 19.08.2018.

********

ಕೊಡಗು ಜಿಲ್ಲೆಯಾದ್ಯಂತ ಭಾರೀ ಮಳೆಯಾಗುತ್ತಿದ್ದು, ಹಲವಡೆ ಭೂ ಕುಸಿತ ಉಂಟಾಗಿದ್ದು ಹೆದ್ದಾರಿ ಸೇರಿದಂತೆ ಗ್ರಾಮೀಣ ರಸ್ತೆ ಸಂಪರ್ಕ ಕಡಿತಗೊಂಡಿರುತ್ತದೆ. ಗಾಳಿ ಮಳೆಯಿಂದ ನೆಲ ಕುಸಿದು ಹಲವಾರು ಮನೆಗಳಿಗೆ ಹಾನಿಯಾಗಿರುತ್ತದೆ. ನದಿ, ತೋಡು ಮುಂತಾದವುಗಳು ತುಂಬಿ ಹರಿಯುತ್ತಿದ್ದು, ಸಮೀಪದ ಮನೆಗಳು ಜಾಲಾವೃತ್ತಗೊಂಡಿರುತ್ತದೆ. ಜಿಲ್ಲೆಯಲ್ಲಿ ಇನ್ನೂ ಕೆಲವು ದಿನಗಳ ಕಾಲ .ಭಾರೀ ಮಳೆಯಾಗುವ ಸಂಭವ ಇರುವ ಬಗ್ಗೆ ಭಾರತ ಹವಾಮಾನ ಇಲಾಖೆಯ ಸೂಚನೆ ಇರುತ್ತದೆ. ಜಿಲ್ಲೆಯ ಹಲವು ಭಾಗಗಳಲ್ಲಿ ತೀವ್ರ ಮಳೆಯಿಂದ ಹಾಗೂ ಭೂ ಕುಸಿತದಿಂದ ಜಲಾವೃತವಾಗಿದ್ದು ಹಲವು ಮಂದಿ ಸಂತ್ರಸ್ತರು ಸಿಲುಕಿಕೊಂಡಿರುತ್ತಾರೆ. ಇವರುಗಳನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವ ಕಾರ್ಯ ಪ್ರಗತಿಯಲ್ಲಿರುತ್ತದೆ. ಈ ಸಂಬಂಧ ಉಲ್ಲೇಖಗಳಂತೆ ನೆರೆಯ ಜಿಲ್ಲೆಗಳ ವಿವಿಧ ಇಲಾಖೆ / ಕಚೇರಿಗಳಿಂದ ಸಿಬ್ಬಂದಿ / ನೌಕರರುಗಳನ್ನು ಅಗತ್ಯ ಮತ್ತು ತುರ್ತು ಕಾರ್ಯಗಳಿಗಾಗಿ ಈ ಜಿಲ್ಲೆಗೆ ನಿಯೋಜಿಸಲಾಗಿರುತ್ತದೆ.

ಉಲ್ಲೇಖಗಳಂತೆ ನಿಯೋಜಿಸಲ್ಪಟ್ಟ ಸಿಬ್ಬಂದಿ / ನೌಕರರಿಗೆ ಲಗತ್ತಿಸಿರುವ **"ಅನುಬಂಧ – ಅ"** ದಂತೆ ಕಾರ್ಯಭಾರ ಹಂಚಿಕೆ ಮಾಡುತ್ತಾ, ನಿಯೋಜಿಸಲಾಗಿರುವ ತಂಡಗಳ ಅಧಿಕಾರಿಗಳು ತಮ್ಮ ಅಧೀನಕ್ಕೆ ನಿಯೋಜಿಸಲಾಗಿರುವ ಸಿಬ್ಬಂದಿ/ ನೌಕರರ ಹಾಜರಾತಿಯನ್ನು ಪ್ರತಿನಿತ್ಯ ಪಡೆದುಕೊಳ್ಳುವುದು. ದಾಸ್ತಾನು ಕೇಂದ್ರಕ್ಕೆ ಆಗಮಿಸುವ ಪರಿಹಾರ ಸಾಮಾಗ್ರಿಗಳನ್ನು ಯಾವುದೇ ವಿಳಂಬಕ್ಕೆ ಆಸ್ಪದವಿಲ್ಲದಂತೆ ಸ್ವೀಕರಿಸುವುದು ಮತ್ತು ವಿತರಣೆ ಮಾಡಲು ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ ನಿಯೋಜಿಸಿರುವ ಸಿಬ್ಬಂದಿ / ನೌಕರರು ಆಯಾ ಕಚೇರಿ ಮುಖ್ಯಸ್ಥರ ನಿರ್ದೇಶನದಂತೆ ಕರ್ತವ್ಯ ನಿರ್ವಹಿಸಲು ಆದೇಶಿಸಿದೆ.

ನಗರಸ್ಥಳೀಯ ಸಂಸ್ಥೆಗಳು ಪರಿಹಾರ ಕೇಂದ್ರಗಳನ್ನು, ಸಮುದಾಯ ಭವನಗಳನ್ನು ಮತ್ತು ಅಂಗನವಾಡಿ ಕೇಂದ್ರಗಳ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಚವಾಗಿ ಇಡುವುದು. ಕುಡಿಯುವ ನೀರಿಗೆ ಸಂಬಂಧಿಸಿದಂತೆ ಶುದ್ದತೆಯನ್ನು ಕಾಪಾಡಲು ಕ್ರಮವಹಿಸುವುದು. ಸಮುದಾಯ ಹಾಗೂ ಸಾರ್ವಜನಿಕ ಶೌಚಾಲಯಗಳನ್ನು ಶುಚಿಗೊಳಿಸುವ ಬಗ್ಗೆ ಕ್ರಮವಹಿಸುವುದು. ಶುಚಿತ್ವ ವಿಳಂಬ ಮಾಡಿದಲ್ಲಿ ಖಾಯಿಲೆ/ ರೋಗ ರುಜಿನಗಳು ಹರಡುವ ಸಾದ್ಯತೆ ಇರುತ್ತದೆ. ಇದರೊಂದಿಗೆ ಈ ಕೆಳಗಿನ ತುರ್ತು ಕ್ರಮಗಳನ್ನು ಕೈಗೊಳ್ಳುವಂತೆ ತಿಳಿಯಪಡಿಸಿದೆ